



# ಮುಳ್ಳಿನ ಸಸ್ಯಗಳ ಕಿರೀಟ ಯುಫೋರ್ಬಿಯಾ

■ ಬಿ.ರಾಮ್‌ಪ್ರಸಾದ್ ಭಟ್

ಚಿಕ್ಕ ಚಿಕ್ಕ ಚಕ್ರಾಕಾರದ ಗುಲಾಬಿ ಬಿಳಿ ಮಿಶ್ರಿತ ಸುಂದರ ಹೂಗಳನ್ನು ತೋಟಗಳಲ್ಲಿ ಕಂಡು ಕೀಳಲು ಹೋದರೆ ಎಚ್ಚರ! ಕಾಂಡದಲ್ಲಿರುತ್ತವೆ ಮುಳ್ಳುಗಳು! ಕಾಂಡವು ನೋಡಲು ಕ್ಯಾಕ್ಟಸ್ ನ ಪಡಿಯಚ್ಚಿನಂತೆ.. ಆದರೆ ಇಲ್ಲಿ ಎಲೆಗಳು ಬೇರೆ. ಈ ಗಿಡದ ಕಾಂಡವನ್ನು ಕತ್ತರಿಸಿ ತಂದು ಮತ್ತೊಂದೆಡೆ ನೆಟ್ಟರೆ ಬೆಳೆಯಬಲ್ಲ ನಿರಂತರ ಹೂ ಬಿಡುವ ಸಸ್ಯವೇ ಯುಫೋರ್ಬಿಯಾ. ಇದನ್ನು ಸ್ಪರ್ಜ್ ಎಂದೂ ಕರೆಯುತ್ತಾರೆ.

ಪ್ಲಾಂಟೇ ಕುಲದ ಯುಫೋರ್ಬಿಯೇಷಿಯೇ (Euphorbiaceae) ಕುಟುಂಬ ಸಸ್ಯವಾದ ಇದನ್ನು ಮುಳ್ಳಿನ ಸಸ್ಯಗಳ ಕಿರೀಟವೆಂದೇ ಗುರುತಿಸಬಹುದು. ದಕ್ಷಿಣ ಆಫ್ರಿಕಾ ಮತ್ತು ಮಡಗಾಸ್ಕರ್‌ನ ಮರುಭೂಮಿಯಲ್ಲಿ ಕಂಡುಬರುವ ಯುಫೋರ್ಬಿಯಾಗಳು ಮತ್ತು ಉತ್ತರ – ದಕ್ಷಿಣ ಅಮೆರಿಕದ 'ಕ್ಯಾಕ್ಟೈ'ಯ ಮಧ್ಯೆ ಭೌತಿಕ ಲಕ್ಷಣಗಳಲ್ಲಿ ಸಾಕಷ್ಟು ಸಾಮ್ಯತೆಗಳಿವೆ.

ಹೂವಿನ ಭಿನ್ನ ರಚನೆಯಿಂದಾಗಿ ವಿಶೇಷವೆನಿಸುವ ಯುಫೋರ್ಬಿಯಾ ಏಕಲಿಂಗಿ ಹೂ ಬಿಡುವ ಸಸ್ಯಗಳ ಸಾಲಿಗೆ ಸೇರುತ್ತದೆ. ಈ ಸಸ್ಯಕ್ಕೆ ಎಲೆಯೋಫೋರ್ಬಿಯೋ, ಎಂಡಾಡೆನಿಯುಮ್, ಮೋನಾ ಡೆನಿಯುಮ್, ಸೈನಾಡೆನಿಯುಮ್, ಪೆಡಿಲ್ಯಾಂಥಸ್ ಎಂಬ ಹೆಸರುಗಳೂ ಇವೆ. ಈ ಸಸ್ಯಗಳು ಹಾಲಿನಂತಹ, ನೊರೆಯುಕ್ಕಿಸುವ ವಿಷಕಾರಿ ಲ್ಯಾಟೆಕ್ಸ್ ನಂತಹ ದ್ರವವನ್ನು ಕಾಂಡದಿಂದ ಒಸರುತ್ತವೆ.

ಮೂರು ಬಗೆಯ ದ್ಯುತಿಸಂಶ್ಲೇಷಣಾ ಕ್ರಿಯೆಗಳನ್ನು ಕೈಗೊಳ್ಳುವ ಏಕೈಕ ಸಸ್ಯ ಸಂಕುಲಕ್ಕೆ ಸೇರಿದ ಕೀರ್ತಿ ಯುಫೋರ್ಬಿಯಾದ್ದು. ವರ್ಷ ಪೂರ್ತಿ ಬೆಳೆಯುವ ಪುಟ್ಟ ಸಸ್ಯಗಳಿವು. ದೊಡ್ಡದಾದರೆ ಬಹುವಾರ್ಷಿಕವಾಗಿ ಜೀವಿಸಬಲ್ಲ ಯುಫೋರ್ಬಿಯಾ ಸಂಕುಲದಲ್ಲಿ 2000ಕ್ಕೂ ಅಧಿಕ ಪ್ರಬೇಧಗಳಿವೆ. ಹೂಬಿಡುವ ಸಸ್ಯಗಳಲ್ಲಿಯೇ ಉನ್ನತ ಸ್ಥಾನ ಗಳಿಸಿದ ಹೆಗ್ಗಳಿಕೆ ಹೊಂದಿದ್ದು, ಅತಿ ಹೆಚ್ಚು ಕ್ರೋಮೋಸೋಮ್‌ಗಳನ್ನು ಒಳಗೊಂಡ ಸಸ್ಯವರ್ಗಕ್ಕೆ ಇದು ಸೇರಿದೆ. ●



